2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ**2/2012**

| | | | |
|---|---|---|---|
| ಸಾಕ್ಷಿದಾರರ ಹೆಸರು | - ಪ್ರಕಾಶ್ | | ಪಿಡಬ್ಲ್ಯೂ - 40 |
| ತಂದೆಯ ಹೆಸರು | - ನರಸಿಂಹಯ್ಯ | | ಸಿಡಬ್ಲ್ಯೂ - 19 |
| ವಯಸ್ಸು | - 41 ವರ್ಷ | | |
| ಉದ್ಯೋಗ | - ಪಿ.ಸಿ.648, ಹೊಸನಗರ ಪೊಲೀಸ್ ಠಾಣೆ | | |
| ವಾಸ ಸ್ಥಳ | - ಹೊಸನಗರ, ಶಿವಮೊಗ್ಗ ಜಿಲ್ಲೆ | | |

ದಿನಾಂಕಃ 16-02-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಪಿ.ಪಿ. ರವರಿಂದ -

1. ನಾನು 2010 ರಿಂದ 2016 ರವರೆಗೆ ಸಾಗರದ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪಿ.ಸಿ.ಯಾಗಿ ಸೇವೆ ಸಲ್ಲಿಸಿದ್ದೇನೆ.

2. ಸಾಗರ ಗ್ರಾಮಾಂತರ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ 210/2011 ಕ್ಕೆ ಸಂಬಂಧಿಸಿದಂತೆ ಆರೋಪಿ ಮತ್ತು ಅನಾಮದೆಯ ಮಹಿಳಾ ಮೃತ ದೇಹದ ಗುರುತು ಪತ್ತೆಗಾಗಿ ನನ್ನನ್ನು ಹಾಗೂ ಪಿ.ಸಿ ಕಿರಣ್ ಕುಮಾರ್ ಮತ್ತು ಪಿ.ಸಿ ರವಿ ಎಂಬುವವರನ್ನು ನೇಮಕ ಮಾಡಿದ್ದು, ಅದರಂತೆ ದಿಃ 20.08.2011 ರಂದು ಠಾಣೆಯಿಂದ ಹೊರಟು ಸಾಗರ ಟೌನ್ ಬಿ.ಹೆಚ್ ರಸ್ತೆ ಲೋಹಿಯ ನಗರ, ಹೆಲಿಪ್ಯಾಡ್, ಕರ್ಕಿ ಕೊಪ್ಪ, ವರದ ಹಳ್ಳಿ ಮುಂತಾದ ಕಡೆಗಳಲ್ಲಿ ಸಂಚರಿಸಿ ಬಾತ್ಮಿದಾರರಿಂದ ಮಾಹಿತಿ ಪಡೆದಿದ್ದು ಹಾಗೂ ಶವದ ಗುರುತು ಪರಿಚಯದ ಬಗ್ಗೆ ನೋಟೀಸ್ ನ್ನು ಜಾರಿಗೊಳಿಸಿದ್ದು

ಅದೇ ದಿನ ಮಧ್ಯಾಹ್ನ 3.30 ಗಂಟೆ ಸಮಯದಲ್ಲಿ ವರದಹಳ್ಳಿಯಿಂದ ವಾಪಸ್ಸು ಸಾಗರದ ಖಾಸಗಿ ಬಸ್ ನಿಲ್ದಾಣಕ್ಕೆ ಬಂದಾಗ ಜೋಗದ ಕಡೆಗೆ ಹೋಗುವ ಬಸ್ ನಿಲ್ಲುವ ಸ್ಥಳದಲ್ಲಿ ಯಾರೋ ಒಬ್ಬ ವ್ಯಕ್ತಿ ನಮ್ಮನ್ನು ನೋಡಿ ತನ್ನ ಇರುವಿಕೆಯನ್ನು ಮರೆಮಾಚಿಕೊಳ್ಳಲು ಪ್ರಯತ್ನ ಪಡುತ್ತಿರುವುದನ್ನು ನಾವು ಗಮನಿಸಿ ಅನುಮಾನ ಬಂದಿದ್ದರಿಂದ ಸದರಿ ವ್ಯಕ್ತಿಯನ್ನು ಹಿಡಿದು ವಿಚಾರಿಸಲಾಗಿ ತನ್ನ ಹೆಸರು ಸುರೇಶ, ವಾಸ ಅಮೃತಹಳ್ಳಿ, ತರೀಕೆರೆ ತಾಃ, ಚಿಕ್ಕಮಗಳೂರು ಜಿಲ್ಲೆ ಎಂದು ತಿಳಿಸಿದ್ದು, ಸದರಿ ವ್ಯಕ್ತಿಯನ್ನು ಮಧ್ಯಾಹ್ನ 3.45 ಗಂಟೆಗೆ ಕರೆದುಕೊಂಡು ಸಾಗರ ಗ್ರಾಮಾಂತರ ವೃತ್ತ ನಿರೀಕ್ಷಕರವರಲ್ಲಿ ವರದಿಯೊಂದಿಗೆ ಹಾಜರು ಪಡಿಸಿರುತ್ತೇವೆ.

3. ನಾನು ಆ ದಿನ ಆರೋಪಿಯನ್ನು ಸಾಗರ ಗ್ರಾಮಾಂತರ ವೃತ್ತ ನಿರೀಕ್ಷಕರವರಲ್ಲಿ ಹಾಜರು ಪಡಿಸಿದ ಬಗ್ಗೆ ವರದಿ ನೀಡಿದ್ದು, ಅದನ್ನು ಈಗ ನೋಡುತ್ತಿದ್ದು, ಅದನ್ನು ನಿ.ಪಿ.70 ಎಂದು ಗುರುತಿಸಲಾಯಿತು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.70(ಎ) ಎಂದು ಗುರುತಿಸಲಾಯಿತು.

4. ನಾನು ಆ ದಿನ ಸಾಗರ ಖಾಸಗಿ ಬಸ್ ನಿಲ್ದಾಣದಲ್ಲಿ ಜೋಗ ಕಡೆ ಹೋಗುವ ಬಸ್ ನಿಲ್ಲುವ ಸ್ಥಳದಲ್ಲಿ ಒಬ್ಬ ವ್ಯಕ್ತಿ ಅನುಮಾನಸ್ಪದವಾಗಿ ನಿಂತಿದ್ದು, ಆತನನ್ನು ನಾವು ಹಿಡಿದುಕೊಂಡು ಸಾಗರ ಗ್ರಾಮಾಂತರ ವೃತ್ತ ನಿರೀಕ್ಷಕರವರಲ್ಲಿ ಹಾಜರು ಪಡಿಸಿದ ವ್ಯಕ್ತಿ ಈಗ ನ್ಯಾಯಾಲಯ ಮುಂದಿರುವ ಆರೋಪಿ ಸುರೇಶನೇ ಆಗಿರುತ್ತಾನೆ.

<u>ಪಾಟೀ ಸವಾಲು ಶ್ರೀ ಪಿ.ಇ.ಎಸ್. ವಕೀಲರಿಂದ – ಆರೋಪಿತನ ಪರವಾಗಿ</u>

5. ನನ್ನನ್ನು 1 ನೇ ಆರೋಪಿ ಮತ್ತು ಅನಾಮದೇಯ ಮಹಿಳೆಯ ಮೃತ ದೇಹದ ಗುರು ಪತ್ತೆಗಾಗಿ ಪಿ.ಸಿ ಕಿರಣ್ ಕುಮಾರ್ ಮತ್ತು ಪಿ.ಸಿ ರವಿ ಇವರೊಂದಿಗೆ ನೇಮಕ ಮಾಡಿದ್ದರ ಕುರಿತು ಅಧಿಕೃತ ದಾಖಲೆ ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನಾನು ಅನಾಮದೇಯ ಮಹಿಳೆಯ ಮೃತ ದೇಹದ ಕುರಿತಂತೆ ಬಾತ್ಮಿದಾರರಿಗೆ ಶವದ ಗುರುತು ಪರಿಚಯದ ಬಗ್ಗೆ ನೋಟೀಸು ನೀಡಿರುವ ಬಗ್ಗೆ ನನ್ನ ವರದಿಯಲ್ಲಿ ಹೇಳಿರುವುದಿಲ್ಲ. ನಾನು ನೋಟೀಸನ್ನು ಕರ್ಕಿ ಕೊಪ್ಪದ ರಮೇಶ ಎಂಬುವವರಿಗೆ ನೀಡಿರುತ್ತೇನೆ. ಅವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ನಾನು ಸದರಿ ರಮೇಶ್ ಎಂಬುವವರಿಗೆ ನೋಟೀಸು ನೀಡಿದ ಬಗ್ಗೆ ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುವುದಿಲ್ಲ. ಕರ್ನಾಟಕ ಪೊಲೀಸ್ ಕೈಪಿಡಿ ಪ್ರಕಾರ ಪೊಲೀಸರು ಯಾವ ಯಾವ ಜಾಗಕ್ಕೆ ಹೋಗಿ ತನಿಖೆ ಮಾಡುತ್ತಾರೋ ಮತ್ತು ಅಲ್ಲಲ್ಲಿ ವ್ಯಕ್ತಿಗಳನ್ನು ವಿಚಾರ ಮಾಡಿದ ಬಗ್ಗೆ ಒಂದು ಟಿಪ್ಪಣಿ ಬರೆಯಬೇಕು ಎಂದರೆ ಸರಿ. ಆ ರೀತಿ ಟಿಪ್ಪಣಿ ಬರೆದುಕೊಂಡಿದ್ದರೆ ಸದರಿ ಟಿಪ್ಪಣಿಯನ್ನು ಠಾಣಾಧಿಕಾರಿಗಳಿಗೆ ಕೊಡಬೇಕು ಎಂದರೆ ಸರಿ. ನಾನು ವರದಿಯನ್ನು ಮಾತ್ರ ನೀಡಿರುತ್ತೇನೆ ಟಿಪ್ಪಣಿ ನೀಡಿರುವುದಿಲ್ಲ. ಆರೋಪಿಯು ಆತನೇ ಎಂಬುದಕ್ಕೆ ಆತನ ಪೋಟೋವನ್ನು ತೆಗೆದುಕೊಂಡಿರುವುದಿಲ್ಲ. ಆರೋಪಿ ಯಾರು ಎಂಬುದರ ಬಗ್ಗೆ ಆತನ ಚಹರಾ ಪಟ್ಟಿ ಆ ದಿನ ನಮ್ಮಲ್ಲಿ ಇರಲಿಲ್ಲ.

6. ಆರೋಪಿಯನ್ನು ವಶಪಡಿಸಿಕೊಂಡಿದ್ದ ಸ್ಥಳದಲ್ಲಿ ಬಹಳಷ್ಟು ಜನ ಇದ್ದರು. ಪ್ರತಿ ಬಸ್ ನಿಲ್ದಾಣಕ್ಕೆ ಒಬ್ಬ ಪೊಲೀಸ್ ಪೇದೆಯನ್ನು ನೇಮಕ

ಮಾಡಿರುತ್ತಾರೆ ಎಂದರೆ ಸರಿ. ಸಾಗರ ಬಸ್ ನಿಲ್ದಾಣ ಇದು ಸಾಗರ ನಗರ ಪೊಲೀಸ್ ಠಾಣೆಗೆ ಒಳಪಡುತ್ತದೆ ಎಂದರೆ ಸರಿ. ಈ ಪ್ರಕರಣದ ಆರೋಪಿಯನ್ನು ವಶಪಡಿಸಿಕೊಂಡ ಸಮಯದಲ್ಲಿ ಸ್ಥಳದ ವ್ಯಾಪ್ತಿಯ ಪೊಲೀಸ್ ಠಾಣೆಯ ಸಿಬ್ಬಂದಿಯವರಾಗಲಿ ಅಥವ ಅಲ್ಲಿ ಇದ್ದಂತ ಜನರ ಸಹಿ ಪಡೆದುಕೊಂಡಿರುವುದಿಲ್ಲ. ನಾನು ಆರೋಪಿಯನ್ನು ವಶಪಡಿಸಿಕೊಂಡ ದಿನ ನನ್ನ ಮೊಬೈಲ್ ಸಂಖ್ಯೆ 9481091623 ಎಂದು ಇರುತ್ತದೆ. ಆ ಸಮಯದಲ್ಲಿ ಸಾಗರ ಬಸ್ ನಿಲ್ದಾಣದ ಹತ್ತಿರ ಸಾಗರದ ಫೋನ್ ಟವರ್ ಇತ್ತು. ಯಾವುದೇ ವ್ಯಕ್ತಿಯನ್ನು ನಮ್ಮ ವಶಕ್ಕೆ ತೆಗೆದುಕೊಳ್ಳಬೇಕಾದರೆ ಆತನ ಅಂಗಶೋದನೆ ಮಾಡಬೇಕು ಎಂದರೆ ಸರಿ.

7. ದಿಃ20.08.2011 ರಂದು ಆರೋಪಿಯ ಹತ್ತಿರ ಮೊಬೈಲ್ ಫೋನ್ ಇತ್ತು ಎಂದರೆ ನನಗೆ ಗೊತ್ತಿಲ್ಲ ಮತ್ತು ಅದರ ಸಂಖ್ಯೆ 9449203136 ಎಂದರೆ ನನಗೆ ಗೊತ್ತಿಲ್ಲ. ನಮ್ಮ ಪೊಲೀಸ್ ಠಾಣೆಯಿಂದ ಸಾಗರ ಬಸ್ ನಿಲ್ದಾಣ ಸುಮಾರು 500 ಮೀಟರ್ ದೂರವಾಗುತ್ತದೆ. ನಮ್ಮ ಪೊಲೀಸ್ ಠಾಣೆಯಿಂದ ತರೀಕೆರೆ ಪೊಲೀಸ್ ಠಾಣೆಗೆ ಸುಮಾರು 130 ಕಿ.ಮೀ ದೂರವಾಗುತ್ತದೆ. ನಾನು 1 ನೇ ಆರೋಪಿಯನ್ನು ವಶಕ್ಕೆ ಪಡೆದ ಬಗ್ಗೆ ಸಾಗರ ಟೌನ್ ಪೊಲೀಸ್ ಠಾಣೆಗೆ ತಿಳಿಸಿರುವುದಿಲ್ಲ. ನಾನು ಮೇಲೆ ಹೇಳಿದ ನನ್ನ ನಂಬರ್ ಜೊತೆ ಆರೋಪಿಯನ್ನು ವಶಪಡಿಸಿಕೊಳ್ಳುವ ಪೂರ್ವದಲ್ಲಿ ತರೀಕೆರೆ ಪೊಲೀಸ್ ಠಾಣೆಗೆ ಹೋಗಿದ್ದೆ ಎಂದರೆ ಇರಬಹುದು. ನಮ್ಮ ಜೊತೆ ಮೇಲೆ ಹೇಳಿದ ಆರೋಪಿಯದ್ದು ಎಂದು ಹೇಳಲಾದ ಮೊಬೈಲ್ ಸಂಖ್ಯೆಯ ಜೊತೆ ಆರೋಪಿಯನ್ನು ಕರೆದುಕೊಂಡು ಹೋಗಿದ್ದೆವು ಎಂದರೆ ಇಲ್ಲ.

8. ನಾನು ಆರೋಪಿಯನ್ನು ತರೀಕೆರೆ ಪೊಲೀಸ್ ಠಾಣೆಯಿಂದ ವಶಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿ ಪತ್ತೆಗಾಗಿ ನೇಮಕಗೊಂಡಿದ್ದು ಮತ್ತು ಅದರಂತೆ ನಾನು ಆರೋಪಿಯನ್ನು ಸಾಗರ ಬಸ್ ನಿಲ್ದಾಣದಲ್ಲಿ ವಶಪಡಿಸಿಕೊಂಡು ಆತನನ್ನು ಸಾಗರ ಗ್ರಾಮಾಂತರ ಪೊಲೀಸ್ ಠಾಣೆಯ ವೃತ್ತ ನಿರೀಕ್ಷಕರ ಮುಂದೆ ಹಾಜರು ಪಡಿಸಿದ್ದು ಸುಳ್ಳು ಎಂದರೆ ಸರಿಯಲ್ಲ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನಾನು ವೃತ್ತ ನಿರೀಕ್ಷಕರಿಗೆ ನೀಡಿದ ವರದಿಯನ್ನು ನಾನೇ ನನ್ನ ಕೈಯಾರೆ ಬರಮಣಿಗೆ ಮಾಡಿರುತ್ತೇನೆ. ಸದರಿ ವರದಿಯನ್ನು ನಾನು ತಿದ್ದುಪಡಿ ಮಾಡಿದ ಬಗ್ಗೆ ಅಥವ ಅದರ ಮೇಲೆ ಬಿಳಿ ಶಾಯಿ ಹಾಕಿದ ಬಗ್ಗೆ ನನಗೆ ಗೊತ್ತಿಲ್ಲ.

9. ನಿ.ಪಿ.70 ಮತ್ತು 71 ರಲ್ಲಿ ಇರುವ ಬರವಣಿಗೆ ಒಂದೇ ಆಗಿರುತ್ತದೆ ಎಂದರೆ ಸರಿ. ಈ ಪ್ರಕರಣದ ದೋಷಾರೋಪಣ ಪತ್ರದಲ್ಲಿ ಇರುವ ಹೆಚ್ಚಿನ ದಾಖಲೆಗಳಲ್ಲಿ ನನ್ನದೇ ಬರವಣಿಗೆ ಇರುತ್ತದೆ ಎಂದರೆ ಸರಿ. ನಾನು ಯಾವುದೇ ವರದಿಯನ್ನು ಮೇಲಾಧಿಕಾರಿಗಳಲ್ಲಿ ಸಲ್ಲಿಸಿದ್ದಲ್ಲಿ ನನ್ನ ಸಹಿ ಕೆಳಗಡೆ ದಿನಾಂಕ ಹಾಕುತ್ತೇನೆ ಎಂದರೆ ಸರಿ. ನಿ.ಪಿ.71 ರಲ್ಲಿ ನಾನು ರುಜು ಮಾಡಿದ ಸ್ಥಳದ ಕೆಳಗೆ ದಿನಾಂಕ ನಮೂದಿಸಿಲ್ಲ ಎಂದರೆ ಸರಿ. ನಿ.ಪಿ.70 ಮತ್ತು 71 ರಲ್ಲಿ ಬರೆದಿರುವ ಪೆನ್ನಿನ ಇಂಕು ಒಂದೇ ಎಂದರೆ ಸರಿಯಲ್ಲ.

10. ನನ್ನನ್ನು ಠಾಣೆಯಲ್ಲಿ ರೈಟರ್ ಎಂದು ನೇಮಕಾತಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ನಮ್ಮ ಮೇಲಾಧಿಕಾರಿಗಳ ಮಾತು ಕೇಳಿಕೊಂಡು ನಿ.ಪಿ.70 ವರದಿಯನ್ನು

ನೀಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಪೊಲೀಸ್ ಠಾಣೆಯ ವಶದಲ್ಲಿ ಆರೋಪಿ 20.08.2011 ರ ಕ್ಕಿಂತ 3 ದಿನ ಮುಂಚೆ ಹಾಗೂ ತರೀಕೆರೆ ಪೊಲೀಸ್ ಠಾಣೆಯಲ್ಲಿ ಅದಕ್ಕೂ ಒಂದು ವಾರ ಮುನ್ನ ವಶದಲ್ಲಿ ಇದ್ದ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

Sd/-

(ಮಂಜುನಾಥ ಸಂಗ್ರೇಶಿ)

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

ಮಾ